ಸಾಕ್ಷಿಯನ್ನು ದಿ:06.01.2023 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ಪ್ರತಿವಾದಿಗಳ ಪರ ಶ್ರೀ ಎಸ್ ಜೆ ವಕೀಲರಿಂದಃ**

ಮೂಲ ಪುರುಷ ಚಿಕ್ಕಣ್ಣನಿಗೆ ಪುರದಪ್ಪ ಮತ್ತು ಬಸಪ್ಪ ಇಬ್ಬರು ಗಂಡು ಮಕ್ಕಳೆಂದರೆ ಸುಳ್ಳು. ಪುರದಪ್ಪನಿಗೆ 5 ಜನ ಮಕ್ಕಳು ಇದ್ದಾರೆ. ಪುರದಪ್ಪನಿಗೆ ಬಸಪ್ಪ ಎನ್ನುವ ತಮ್ಮನಿದ್ದಾನೆ. ಮೂಲ ಪುರುಷ ಚಿಕ್ಕಣ್ಣನ ಇಬ್ಬರು ಮಕ್ಕಳಾದ ಪುರದಪ್ಪ ಮತ್ತು ಬಸಪ್ಪ ಪಿತ್ರಾರ್ಜಿತ ಸ್ವತ್ತುಗಳನ್ನು ವಿಭಾಗ ಮಾಡಿಕೊಂಡಿದ್ದಾರೋ ಇಲ್ಲವೋ ಗೊತ್ತಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಏನು ಬರೆಸಿದ್ದೇನೆ ಎಂದು ತಿಳಿದುಕೊಂಡಿದ್ದೇನೆ. ಸದರಿ ಪ್ರಮಾಣ ಪತ್ರದಲ್ಲಿ ದಾವಾ ಸ್ವತ್ತುಗಳ ಬಗ್ಗೆ ಮತ್ತು ಖಾತಾ ನಕಲುಗಳ ಬಗ್ಗೆ ಹಾಗೂ ಪತ್ರಗಳ ಬಗ್ಗೆ ಬರೆಸಿದ್ದೇನೆ. ನನ್ನ ಪ್ರಮಾಣ ಪತ್ರವನ್ನು ನನ್ನ ತಾಯಿ ಹೇಳಿ ಬರೆಸಿದ್ದಾಳೆ. ಬಸಪ್ಪನ ಪಾಲಿಗೆ ಯಾವ ಆಸ್ತಿಗಳು ಹೋಗಿವೆ ಎಂದು ಗೊತ್ತಿಲ್ಲ. ಪುರದಪ್ಪನ ಪಾಲಿಗೆ ಬಂದ ಜಮೀನುಗಳ ಬಗ್ಗೆ ಹೇಳುತ್ತೇನೆ . ಸಾಕ್ಷಿ ಪುನಃ ಪುರದಪ್ಪನ ಮಗ ಚಿಕ್ಕಣ್ಣನಿಗೆ ಬಂದ ಆಸ್ತಿಗಳ ಬಗ್ಗೆ ಹೇಳುತ್ತೇನೆ. ಸರ್ವೆ ನಂ.87, 23, ಇನ್ನು ಇತರೆ ಜಮೀನುಗಳು ಪುರದಪ್ಪನ ಪಾಲಿಗೆ ಬಂದಿರುತ್ತದೆ. ಒಟ್ಟು 5-6 ಜಮೀನುಗಳು ಪುರದಪ್ಪನ ಪಾಲಿಗೆ ಬಂದಿರುತ್ತವೆ. ಈ ದಾವೆಯಲ್ಲಿ ಕೇವಲ ಎರಡು ಜಮೀನುಗಳು ಅಂದರೆ ಸರ್ವೆ ನಂ.87 ಮತ್ತು 23 ನ್ನು ಮಾತ್ರ ಸೇರಿಸಿದ್ದೇನೆ ಇನ್ನೂ ಬೇರೆ ಜಮೀನುಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ.

ಚಿಕ್ಕಣ್ಣ ಬೇರೆ ಆಸ್ತಿಗಳನ್ನು ತನ್ನ ಹೆಂಡತಿ ಹೆಸರಿನಲ್ಲಿ ಖಾತೆ ಮಾಡಿಸಿದ್ದಾನೆ. ಈ ದಾವೆಯಲ್ಲಿ ಸೇರಿಸದ ಇನ್ನೂ 3-4 ಆಸ್ತಿಗಳು ಮೊದಲು ಚಿಕ್ಕಣ್ಣನ ಹೆಸರಿನಲ್ಲಿತ್ತು. ಈಗ ಶಾಂತಕುಮಾರಿ ಹೆಸರಿನಲ್ಲಿ ಖಾತೆಗಳು ಇವೆ. ರಂಗನಾಥ ಪುರದಲ್ಲಿ ಒಂದು ಮನೆ ಇರುತ್ತದೆ

ಅದನ್ನು ಈ ದಾವೆಯಲ್ಲಿ ಸೇರಿಸಿಲ್ಲ. ಈ ಎಲ್ಲಾ ಆಸ್ತಿಗಳನ್ನು ದಾವೆಯಲ್ಲಿ ಸೇರಿಸಲು ನನಗೆ ಯಾವುದೇ ತೊಂದರೆ ಇಲ್ಲ. ಪುರದಪ್ಪ ಮತ್ತು ಬಸಪ್ಪ ಪಿತ್ರಾರ್ಜಿತ ಆಸ್ತಿಗಳನ್ನು ವಿಭಾಗ ಮಾಡಿಕೊಂಡ ಬಗ್ಗೆ ದಾವೆಯಲ್ಲಿ ಯಾಕೆ ಹೇಳಿಲ್ಲ ಎನ್ನುವುದು ಗೊತ್ತಿಲ್ಲ. ದಾವೆಯಲ್ಲಿ ಪುರದಪ್ಪನ ತಮ್ಮ ಬಸಪ್ಪನ ಪಾಲಿಗೆ ಯಾವ ಆಸ್ತಿಗಳು ಹೋಗಿವೆ ಎಂದು ಬರೆಸಿಲ್ಲ. ಚಿಕ್ಕಣ್ಣನ ಇಬ್ಬರು ಗಂಡು ಮಕ್ಕಳು ಪಿತ್ರಾರ್ಜಿತ ಆಸ್ತಿಗಳನ್ನು ಪಾಲು ಮಾಡಿಕೊಂಡ ಬಗ್ಗೆ ಯಾವುದೇ ದಾಖಲೆ ಹಾಜರು ಮಾಡಿಲ್ಲ. ನಾನಾಗಲೀ ನನ್ನ ತಾಯಿಯಾಗಲೀ ಅಥವಾ ಇತರೇ ವಾದಿಯರು ಚಿಕ್ಕಣ್ಣನ ಇಬ್ಬರು ಮಕ್ಕಳು ಆಸ್ತಿಗಳನ್ನು ಪಾಲು ವಿಭಾಗ ಮಾಡಿಕೊಂಡ ಬಗ್ಗೆ ವಿಚಾರಿಸಿ ತಿಳಿದುಕೊಂಡಿಲ್ಲ.

ಚಿಕ್ಕಣ್ಣನ ಮಗ ಬಸಪ್ಪನಿಗೆ ಇಬ್ಬರು ಗಂಡು ಮಕ್ಕಳು. ಅವರ ಹೆಸರು ರದ್ರಣ್ಣ, ಚನ್ನಬಸಣ್ಣ. ಅಲ್ಲದೆ ಒಬ್ಬ ಹೆಣ್ಣು ಮಗಳು ಆಕೆ ಹೆಸರು ಪುಟ್ಟಮ್ಮ. ಗಂಡು ಮಕ್ಕಳ ಪೈಕಿ ರುದ್ರಣ್ಣ ಮೃತಪಟ್ಟಿರುತ್ತಾನೆ. ಸದರಿ ರದ್ರಣ್ಣನಿಗೆ ಹೆಂಡತಿ 2 ಹೆಣ್ಣು ಮತ್ತು ಒಂದು ಗಂಡು ಒಟ್ಟು 3 ಜನ ಮಕ್ಕಳು ಇದ್ದಾರೆ. ಪುಟ್ಟಮ್ಮ ಮೃತಪಟ್ಟಿದ್ದು ಆಕೆಗೆ ಮೂರು ಜನ ಜೀವಂತ ಮಕ್ಕಳಿದ್ದಾರೆ.

(ಈ ಹಂತದಲ್ಲಿ ವಾದಿ ಪರ ವಕೀಲರು ಇನ್ನೂ ಬಿಟ್ಟು ಹೋಗಿರುವ ಆಸ್ತಿಗಳ ಬಗ್ಗೆ ಮತ್ತು ಪಕ್ಷಗಾರರ ಬಗ್ಗೆ ಸಾಕ್ಷಿಯನ್ನು ವಿಚಾರಣೆ ಮಾಡಲು ಅವಕಾಶ ಕೇಳಿದ್ದರಿಂದ ಪಾಟೀ ಸವಾಲನ್ನು ಮೂಂದೂಡಲಾಯಿತು)

ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ ಹಿರಿಯೂರು.